# ದೇವ ಬಂದಾನಮ್ಮ ಸ್ವಾಮಿ ಬಂದಾನೊ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The lyrics are fully matching in both the books and also with the singer.

ರಾಗ: ಶಂಕರಾಭರಣ ತಾಳ: ಆದಿ

ದೇವ ಬಂದಾನಮ್ಮ ಸ್ವಾಮಿ ಬಂದಾನೊ
ದೇವರ ದೇವ ಶಿಖಾಮಣಿ ಬಂದಾನೊ ॥ ಪ ॥

ಉರಗಶಯನ ಬಂದ ಗರುಡಗಮನ ಬಂದ
ನರಗೊಲಿದವ ಬಂದ ನಾರಾಯಣ ಬಂದಾನೊ ॥ 1 ॥

ಮಂದರೋದ್ಧರ ಬಂದ ಮಾಮನೋಹರ ಬಂದ
ವೃಂದಾವನಪತಿ ಗೋವಿಂದ ಬಂದಾನೊ ॥ 2 ॥

ನಕ್ರಹರನು ಬಂದ ಚಕ್ರಧರನು ಬಂದ
ಅಕ್ರೂರಗೊಲಿದ ತ್ರಿವಿಕ್ರಮ ಬಂದಾನೊ ॥ 3 ॥

ಪಕ್ಷಿವಾಹನ ಬಂದ ಲಕ್ಷ್ಮಣಾಗ್ರಜ ಬಂದ
ಅಕ್ಷಯ ಫಲದ ಶ್ರೀ ಲಕ್ಷ್ಮೀರಮಣ ಬಂದಾನೊ ॥ 4 ॥

ನಿಗಮಗೋಚರ ಬಂದ ನಿತ್ಯ ತೃಪ್ತನು ಬಂದ
ನಗೆಮುಖ ಪುರಂದರ ವಿಠಲ ಬಂದಾನೊ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಉರಗಶಯನ** = ಶೇಷಶಾಹಿ

**ನರಗೊಲಿದವ –** ಅರ್ಜುನನಿಗೆ ಒಲಿದವನು.

**ಮಂದರೋದ್ಧರ** = ಕೂರ್ಮಾವತಾರ

**ಮಾಮನೋಹರ –** ಲಕ್ಷ್ಮಿ (ಮಾ) ಮನಸ್ಸನ್ನು ಅಪಹರಿಸಿದವನು (ಎಂದರೆ ಲಕ್ಷ್ಮಿಗೆ ಪ್ರಿಯನಾದವನು).

**ನಕ್ರಹರ –** ಮೊಸಳೆಯನ್ನು ಕೊಂದವನು (ಗಜೇಂದ್ರ ಮೋಕ್ಷ).

**ಅಕ್ರೂರ –** ಯಾದವಶ್ವಫಲ್ಕನ ಮಗ; ಕಂಸನ ಮಂತ್ರಿ; ಕಂಸನ ಆಣತಿಯಂತೆ ಮಧುರೆಗೆ ಕೃಷ್ಣನನ್ನು ಕರೆತರುವಾಗ ದಾರಿಯಲ್ಲಿ ಯಮುನಾ ನದಿಯಲ್ಲಿ ಸ್ನಾನ ಮಾಡುವಾಗ ಕೃಷ್ಣನ ದಿವ್ಯರೂಪವನ್ನು ಕಂಡವನು.

**ತ್ರಿವಿಕ್ರಮ** = ವಾಮನಾವತಾರ

**ಲಕ್ಷ್ಮಣಾಗ್ರಜ** = ರಾಮ

**ಅಕ್ಷಯ ಫಲದ –** ದ್ರೌಪದಿಗೆ ಅಕ್ಷಯವನ್ನು ದಾನಮಾಡಿದವನು (ದೂರ್ವಾಸಾತಿಥ್ಯದ ಪ್ರಕರಣದಲ್ಲಿ ಅಕ್ಷಯ ಪಾತ್ರೆ. ದುಃಶಾಸನನಿಂದ ಒದಗಿದ ಮಾನಭಂಗದ ಪ್ರಕರಣದಲ್ಲಿ ಅಕ್ಷಯ ವಸ್ತ್ರ).

**ನಿಗಮಗೋಚರ –** ವೇದಗಳಿಂದ ಮಾತ್ರ ತಿಳಿಯಲ್ಪಡತಕ್ಕವನು.

**Classification:** Keerthane
**Ankita:** purandara vittala
**Location:** NA
**Category:** dashavatara, Vishnu aradhane
**Group Words:** hanuma, deva, uraga, Vishnu, garuda, vrundavana, pati, akrura, mosale, pakshi, lakshmana, Akshaya, Lakshmi
**Pravachana:** NA
**Explanation:** NA